ಓ.ಎಸ್.ನಂ.**68/2014**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **12.03.2026**.
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಮ್.ಸಿ.ಜೆ. ವಕೀಲರಿಂದ**

**1966**ರಲ್ಲಿ ನಮ್ಮ ತಾತನ ಹೆಸರಿಗೆ ವ್ಯವಸ್ಥಾ ಪತ್ರವಾಗಿದ್ದು ಅದರ ಆಧಾರ ಮೇಲೆ ಈ ದಾವೆಯನ್ನು ಹಾಕಿದ್ದೇವೆ. ಸದರಿ ವ್ಯವಸ್ಥಾ ಪತ್ರದ ಆಧಾರದ ಮೇಲೆ ವಾದಿ ಲಕ್ಷ್ಮಮ್ಮನವರೇ ಮಾಲಿಕರು ಎಂದು ಘೋಷಿಸಲು ಪರಿಹಾರ ಕೇಳಿದ್ದಾರೆ. ಸದರಿ ಘೋಷಣೆಯ ಪರಿಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ಪರಿಹಾರ ಕೇಳಿಲ್ಲ. ವಾದಿಯ ತಂದೆ ನರಸಿಂಹಯ್ಯನವರು ವ್ಯವಸ್ಥಾ ಪತ್ರದ ಆಧಾರದ ಮೇಲೆ ತಾವೇ ಮಾಲಿಕರು ಎಂದು ಘೋಷಿಸಲು ಏನಾದರೂ ದಾವೆ ಹಾಕಿದ್ದರಾ? ಎಂದರೆ ಇಲ್ಲ. ವಾದಿಯನ್ನು ಹೊರತುಪಡಿಸಿ ನರಸಿಂಹಯ್ಯನವರ ಬೇರೆ ವಾರಸುದಾರರು ವ್ಯವಸ್ಥಾ ಪತ್ರದ ಆಧಾರದ ಮೇಲೆ ತಾವೇ ಮಾಲಿಕರು ಎಂದು ಘೋಷಿಸಲು ಏನಾದರೂ ದಾವೆ ಹಾಕಿದ್ದರಾ? ಎಂದರೆ ಇಲ್ಲ.

ವಾದಿಯ ಮಗನಾದ ಸಿದ್ದಗಂಗನವರ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇದೆ ಎಂದು ತಿಳಿಸಿದ್ದು, ಅವರು ವ್ಯವಸ್ಥಾ ಪತ್ರದ ಆಧಾರದ ಮೇಲೆ ತಾವೇ ಮಾಲಿಕರು ಎಂದು ಘೋಷಿಸಲು ಏನಾದರೂ ದಾವೆ ಹಾಕಿದ್ದರಾ? ಎಂದರೆ ಹೌದು. ಅವರು ಅಸಲು ದಾವೆ ನಂ.**262/2009**ರಲ್ಲಿ ಹಾಕಿದ್ದರು. ಸದರಿ ದಾವೆಯನ್ನು ನನ್ನ ತಂದೆ ಮತ್ತು ಅಜ್ಜಿ ಸೇರಿ ಹಾಕಿದ್ದರು. ಸದರಿ ದಾವೆಯು ಬಾಕಿ ಇದೆಯಾ ಎಂದರೆ ಗೊತ್ತಿಲ್ಲ. ಸದರಿ ದಾವೆಯು ದಿನಾಂಕಃ**22.04.2015**ರಲ್ಲಿ ವಜಾ ಆಗಿದೆ ಎಂದು ಸಾಕ್ಷಿಗೆ ಸದರಿ ದಾವೆಯ ಆದೇಶದ ಹಾಳೆ, ದಾವ ಪತ್ರ ಮತ್ತು ಲಿಖಿಲ ಹೇಳಿಕೆಯ ದೃಢೀಕೃತ ನಕಲುಗಳನ್ನು ತೋರಿಸಿದಾಗ ಅವುಗಳನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿರುವ ಕಾರಣ

ಸದರಿ ದಾಖಲಾತಿಗಳನ್ನು ನಿ.ಡಿ.**1** ರಿಂದ **3** ಎಂದು ಗುರುತಿಸಿಲಾಯಿತು. ಸದರಿ ದಾವೆಯಲ್ಲಿ ವಾದಿಯರು ತಮ್ಮ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎಂದು ಸಲ್ಲಿಸಿದ ಅರ್ಜಿ ಕೂಡ ವಜಾ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಮದ್ಯಂತರ ಅರ್ಜಿಯ ಆದೇಶದ ಮೇಲೆ ನನ್ನ ತಂದೆಯು ಅಫೀಲ್ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಅಫೀಲ್ ಕೂಡ ವಜಾ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಕೇಸಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ .ಅಸಲು ದಾವೆ ಸಂಖ್ಯೆ:**262/2009**ರ ತೀರ್ಪಿನ ವಿರುದ್ಧ ಏನಾದರೂ ಅಫೀಲ್ ಸಲ್ಲಿಸಿದ್ದೀರಾ? ಎಂದರೆ ಇಲ್ಲ. ಯಾವ ಕಾರಣಕ್ಕಾಗಿ ಅಫೀಲ್ ಸಲ್ಲಿಸಿಲ್ಲ ಎಂದರೆ ಗೊತ್ತಿಲ್ಲ. ವಾದಿ ಮತ್ತು ನನ್ನ ತಂದೆಯು ಈಗಾಗಲೇ ದಾವೆ ಸಲ್ಲಿಸಿದ್ದರೂ ಕೂಡ ಯಾವ ಕಾರಣಕ್ಕಾಗಿ ಇನ್ನೊಂದು ದಾವೆಯನ್ನು ಸಲ್ಲಿಸಿದ್ದೀರಾ? ಎಂದರೆ ಸಾಕ್ಷಿಯು ನನ್ನ ತಂದೆ ಕಾಣೆಯಾಗಿದ್ದ ಕಾರಣ ಈ ದಾವೆ ಹಾಕಿದ್ದೇವೆ ಎಂದು ಹೇಳುತ್ತಾರೆ. ನನ್ನ ತಂದೆ ಸಲ್ಲಿಸಿದ ನನ್ನ ತಂದೆ ಸಲ್ಲಿಸಿದ ದಾವೆ ಮತ್ತು ಅಫೀಲಿನಲ್ಲಿ ಅವರು ಪ್ರಕರಣವನ್ನು ನಡೆಸಲು ಆಸಕ್ತಿ ತೋರಿಸದೇ ಇದ್ದ ಕಾರಣ ಸದರಿ ದಾವೆ ಮತ್ತು ಅಫೀಲ್ ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದು ಅಸಲು ದಾವೆ ಸಂಖ್ಯೆ:**262/2009**ರ ಮಧ್ಯಂತರ ಅರ್ಜಿ ವಜಾ ಆಗಿದೆ ಎಂದರೆ ಸರಿಯಲ್ಲ.

ನಿ.ಪಿ.**3**ರಲ್ಲಿ ಬಂಡಪ್ಪ ಮತ್ತು ಬೊಮ್ಮಲಿಂಗಯ್ಯನವರ ಹೆಸರು ನಮೂದಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಕ್ರಯಪತ್ರವನ್ನು ನೋಡಿದ್ದೀರಾ? ಎಂದರೆ ಇಲ್ಲ. ಸದರಿ ಬಂಡಪ್ಪ ಮತ್ತು ಬೊಮ್ಮಲಿಂಗಯ್ಯನವರು ದಿನಾಂಕ:**28.01.1958**ರಂದು ಮುತ್ತರಾಯಪ್ಪನವರ ಕಡೆಯಿಂದ ದಾವಾ ಆಸ್ತಿಯನ್ನು ಮತ್ತು ಇತರೆ ಐದು ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ದಾವಾ ಆಸ್ತಿ ಹಾಗೂ ಇತರೆ ಐದು ಆಸ್ತಿಗಳ ಖಾತೆಯು ಬಂಡಪ್ಪ ಮತ್ತು ಬೊಮ್ಮಲಿಂಗಯ್ಯನವರ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ನಿ.ಪಿ.**3**ರಲ್ಲಿ ನಮೂದಾಗಿರುವ

ನರಸಿಂಹಯ್ಯ ಯಾರು? ಎಂದರೆ ವಾದಿಯ ತಂದೆ. ಅದೇ ರೀತಿ ನಿ.ಪಿ.3ರಲ್ಲಿ ನಮೂದಾಗಿರುವ ಸಿದ್ದಗಂಗ ಯಾರು ಎಂದರೆ ವಾದಿಯ ಮಗ ಹಾಗೂ ನನ್ನ ತಂದೆ ಆಗಬೇಕು. ನಿ.ಪಿ.3ರಲ್ಲಿ ನಮ್ಮ ತಂದೆ ಮತ್ತು ತಾತನ ಹೆಸರು ಸೃಷ್ಟಿ ಆಗಿಲ್ಲ. ನಿ.ಪಿ.3ರಲ್ಲಿ ಎಮ್.ಆರ್.1/65–66ರ ಬಗ್ಗೆ ನಮೂದಾಗಿದ್ದು ಸದರಿ ಮ್ಯುಟೇಷನ್ ದಾಖಲೆಯನ್ನು ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. 1965 ರಿಂದ 1998ರ ವರೆಗೂ ನರಸಿಂಹಯ್ಯನವರ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ.

ವಾದಿ ಮತ್ತು ಸಿದ್ದಗಂಗಪ್ಪನವರು ಹಾಕಿದ ದಾವೆಯು ವಜಾ ಆದ ನಂತರ ವಾದಿಯು ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಹಾಕಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಪತ್ರ ಇರುವ ಕಾರಣ ನಮಗೆ ದಾವೆ ಆಸ್ತಿಯು ಬರಬೇಕು ಎಂದು ಈ ದಾವೆಯನ್ನು ಹಾಕಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಖಾತೆಯು ಇಲ್ಲಿಯವರೆಗೂ ನನ್ನ ತಂದೆಯ ಹೆಸರಿನಲ್ಲಿ ಬರುತ್ತಿದ್ದೆ. ನನ್ನ ತಂದೆಯು ಕಾಣೆಯಾಗಿದ್ದಾರೆ ಎಂದು ತಿಳಿಸಿದ್ದು ಈ ಬಗ್ಗೆ ಅವರ ವಾರಸುದಾರರು ಯಾವುದೇ ದಾವೆ ಹಾಕಿಲ್ಲ. ನನ್ನ ತಂದೆ ಕಾಣೆ ಆಗಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಯಾವ ಆಧಾರ ಮೇಲೆ ನಿಮ್ಮ ತಂದೆ ಮೃತಪಟ್ಟಿದ್ದಾರೆ ಎಂದು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಕಾಣೆಯಾಗಿರುವುದರಿಂದ ಈ ರೀತಿ ಬರೆಸಿದ್ದೇವೆ ಎಂದು ಹೇಳುತ್ತಾರೆ. ನನ್ನ ತಂದೆ ಮತ್ತು ಅವರ ವಾರಸುದಾರರನ್ನು ಸೇರಿಸದೇ ನನ್ನ ಅಜ್ಜಿಗೆ ಈ ದಾವೆಯನ್ನು ಹಾಕಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಾದಿಯು ವ್ಯವಸ್ಥಾ ಪತ್ರದ ಆಧಾರ ಮೇಲೆ ಘೋಷಣಾತ್ಮಕ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಈ ರೀತಿ ಪರಿಹಾರ ಕೇಳದೇ ಇರುವ ಕಾರಣ ಈ ದಾವೆಯು ಊರ್ಜಿತವಲ್ಲ ಎಂದರೆ ಸರಿಯಲ್ಲ.

ನಿ.ಪಿ.2– ವ್ಯವಸ್ಥಾ ಪತ್ರವನ್ನು ಮರಿಯಪ್ಪನವರು ನರಸಿಂಹಯ್ಯನವರಿಗೆ ಬರೆದುಕೊಟ್ಟಿದ್ದಾರೆ. ನಿ.ಪಿ.2ರಲ್ಲಿ ಏನು ಬರೆದಿದೆ ಎಂದು ನಾನು ಓದಿ

ತಿಳಿದುಕೊಂಡಿಲ್ಲ. ಮರಿಯಪ್ಪ ಮತ್ತು ನರಸಿಂಹಯ್ಯನವರು ಸಂಬಂಧಿಕರಲ್ಲ ಎಂದರೆ ಸರಿ. ಮರಿಯಪ್ಪನವರು ಶಿವನಯ್ಯನವರು ಮಗ ಎಂದರೆ ಗೊತ್ತಿಲ್ಲ. ಶಿವನಯ್ಯನವರಿಗೆ ಗಂಗಯ್ಯ, ಬಂಡಪ್ಪ ಮತ್ತು ಮರಿಯಪ್ಪ ಎಂದು ಮೂರು ಜನ ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಿವನಯ್ಯನಿಗೆ ಒಬ್ಬನೇ ಮಗನಿದ್ದಾನೆ ಎಂದು ಹೇಳುತ್ತಾರೆ. ಈ ರೀತಿ ಒಬ್ಬನೇ ಮಗನಿದ್ದನು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ಮರಿಯಪ್ಪನಿಗೆ ಸಂತಾನವಿದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ಸದರಿ ಮರಿಯಪ್ಪನವರ ಅಣ್ಣನ ಮಕ್ಕಳೇ ಈ ಕೇಸಿನ ಪ್ರತಿವಾದಿಗಳು ಎಂದರೆ ಸರಿಯಲ್ಲ. ವ್ಯವಸ್ಥಾ ಪತ್ರವನ್ನು ಒಂದೇ ಕುಟುಂಬದಲ್ಲಿ ಮಾಡಿಕೊಳ್ಳುವ ಪತ್ರ ಎಂದರೆ ಸಾಕ್ಷಿಯು ಮರಿಯಪ್ಪನವರನ್ನು ನರಸಿಂಹಯ್ಯನವರು ನೋಡಿಕೊಂಡಿರುವ ಕಾರಣ ಸದರಿ ಪತ್ರವನ್ನು ಬರೆದಿದ್ದಾರೆ ಎಂದು ಹೇಳುತ್ತಾರೆ. ಮರಿಯಪ್ಪ ಮತ್ತು ನರಸಿಂಹಯ್ಯನವರು ಒಂದೇ ಕುಟುಂಬದವರು ಆಗದೇ ಇರುವ ಕಾರಣ ಸದರಿ ವ್ಯವಸ್ಥಾ ಪತ್ರವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ವ್ಯವಸ್ಥಾ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತು. ಸರ್ವೆ ನಂ.**1/4, 1/9, 5/10** ಮತ್ತು **1/12**ರ ಜಮೀನುಗಳನ್ನು ಮರಿಯಪ್ಪನವರು ನರಸಿಂಹಯ್ಯನವರಿಗೆ ಕೊಟ್ಟಿದ್ದಾರೆ. ಈ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿದ್ದೀರಾ? ಎಂದರೆ ಇಲ್ಲ. ಉಳಿದ ಮೂರು ಸ್ವತ್ತುಗಳ ಬಗ್ಗೆ ದಾವೆಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ತಾತನವರು ಮರಿಯಪ್ಪನ ಕುಟುಂಬದವರು ಆಗದೇ ಇರುವ ಕಾರಣ ಸದರಿ ವ್ಯವಸ್ಥಾ ಪತ್ರವನ್ನು ಮಾಡಿಕೊಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ವ್ಯವಸ್ಥಾ ಪತ್ರದಲ್ಲಿ ನನ್ನ ತಾತನವರು ಮರಿಯಪ್ಪನವರನ್ನು ನೋಡಿಕೊಳ್ಳುತ್ತಿದ್ದ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಬಗ್ಗೆ ಸದರಿ ಪತ್ರದ ಬಗ್ಗೆ ವಾದಿ ಮಾಹಿತಿ ಕೊಟ್ಟಿದ್ದರು. ಮರಿಯಪ್ಪನವರ ಹೆಸರಿನಲ್ಲಿ ಯಾವುದೇ ದಾಖಲಾತಿಗಳು ಬಂದಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಯಾವುದೇ ದಾಖಲಾತಿ ಇಲ್ಲ ಎಂದು ತಾಲೂಕು

ಕಚೇರಿಯಲ್ಲಿ ಹಿಂಬರಹ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ದಾವಾ ಆಸ್ತಿಯು ಮರಿಯಪ್ಪನವರ ಆಸ್ತಿ ಅಲ್ಲದೆ ಇರುವ ಕಾರಣ ಅವರ ಹೆಸರಿನಲ್ಲಿ ಯಾವುದೇ ದಾಖಲಾತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮರಿಯಪ್ಪನವರ ತಂದೆಯ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಯಾರಿಗೆ ಸೇರಿತ್ತು ಎಂದರೆ ಗೊತ್ತಿಲ್ಲ.

**ಮುಂದುವರೆದ ವಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.